**ಓ ಎಸ್ ನಂಃ 49/2019**

**ಡಿ. ಡಬ್ಲ್ಯೂ ಃ 2**

**ದಿಃ 22.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 2 ರಿಂದ 4 ರವರ ಪರ ಶ್ರೀ ಟಿ ಕೆ ಹೆಚ್ ವಕೀಲರಿಂದ ಃ**

ನಾನು ಬಿ.ಎ., ಪದವೀಧರನಾಗಿರುತ್ತೇನೆ. ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲುಬರುತ್ತದೆ. ದಾವಾ ಸ್ವತ್ತಿನ ಸ.ನಂ. 113 ಆಗಿರುತ್ತದೆ. ಅದು 1 ಎಕರೆ 33 ಗುಂಟೆ ಜಮೀನಿರುತ್ತದೆ. ನಾನು ದಾವಾ ಸ್ವತ್ತಿನ ಪಹಣಿಯನ್ನು ನೋಡಿರುತ್ತೇನೆ. ಅದು ಈಗ ನನ್ನ ತಮ್ಮ ರಾಜು ರವರ ಹೆಸರಿನಲ್ಲಿರುತ್ತದೆ. ರಾಜು ರವರ ಹೆಸರಿಗೆ ಹೇಗೆ ಮತ್ತು ಯಾವಾಗ ಖಾತೆ ಬದಲಾವಣೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ರಾಜು ರವರ ಹೆಸರಿಗೆ ಖಾತೆ ಇರುವ ವಿಚಾರ ನಾನು ಗೋವಿಂದರಾಜು ರವರ ಜೊತೆಗೆ ಕರಾರು ಮಾಡಿಕೊಳ್ಳಲು ಹೋದಾಗ ಗೊತ್ತಾಗಿರುತ್ತದೆ. ಯಾವ ಆಧಾರದ ಮೇಲೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ನನಗೆ ಗೊತ್ತಾಗಿರುವುದಿಲ್ಲ.

ಪ್ರಸ್ತುತ ದಾವೆಯನ್ನು ನಾನು ಪ್ರತ್ಯೇಕವಾಗಿ ವಕೀಲರನ್ನು ಇಟ್ಟು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ನಾನು ವಾದಿಗೆ ಕರಾರು ಮಾಡಿಕೊಟ್ಟಿರುವುದು ಸತ್ಯ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ. ನನ್ನ ತಮ್ಮ ರಾಜು ರವರು ಪ್ರತ್ಯೇಕವಾಗಿ ವಕೀಲರನ್ನು ಇಟ್ಟು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ರಾಜುರವರು ಸಲ್ಲಿಸಿರುವ ಪ್ರತಿವಾದಪತ್ರದ ಬಗ್ಗೆ ನಾನು ಓದಿ ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತು ನನ್ನ ತಂದೆಗೆ ದರ್ಕಸ್ ನ ಮೂಲಕ ಮಂಜೂರಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ.

**ಸಾಕ್ಷಿಗೆ ದಿನಾಂಕ ಃ 24.07.2006 ರ ಮರಣ ಶಾಸನವನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿ ಯಾರದು ಎಂದು ಕೇಳಿದರೆ ಸಾಕ್ಷಿಯು ಅದು ನನ್ನ ತಂದೆಯ ಸಹಿ ಇರಬಹುದು ಎಂದು ಸಾಕ್ಷಿ ಹೇಳಿದ್ದು, ಸದರಿ ದಾಖಲಾತಿಯನ್ನು ನಿ ಡಿ 4 ಎಂದು ಗುರುತಿಸಲಾಯಿತು. (ಸದರಿ ದಾಖಲಾತಿಯನ್ನು ಗುರುತಿಸಲು ಪ್ರತಿವಾದಿ 1 ರವರ ಪರ ವಕೀಲರು ತಕರಾರು ಮಾಡಿದ್ದು ಅದನ್ನು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ) ನಿ ಡಿ 4 ರಲ್ಲಿ** ನಾನು ಸಹಿ ಮಾಡಿರುವುದಿಲ್ಲ. ಅಲ್ಲಿ ಇರುವ ಅಂಜನಮೂರ್ತಿ ಪಿ ಎಸ್ ಎನ್ನುವ ಸಹಿ ನನ್ನದಲ್ಲ ಎಂದು ನುಡಿಯುತ್ತಾರೆ. ಮಾನ್ಯ ನ್ಯಾಯಾಲಯದ ಮುಂದೆ ಹಾಕಲಾಗಿರುವ ವಕಾಲತ್ ಹಾಕಲಾಗಿರುತ್ತದೆ.ಸದರಿ **ವಕಾಲತ್ ನ್ನು ನಿ ಡಿ 5 ಎಂದು ಗುರುತಿಸಿ ನಿ ಡಿ 5 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿ ಡಿ 5 ಎ ಎಂದು**

ಗುರುತಿಸಲಾಯಿತು. ಶಿವಣ್ಣ ನ ಮಗ ಹೊನ್ನಪ್ಪ ಯಾರೆಂದು ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತಾಗಿದ್ದು ಅದನ್ನು ನನ್ನ ತಂದೆ ರಾಜು ರವರಿಗೆ ವಿಲ್ ಮುಖಾಂತರ ನೀಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ವಿಲ್ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುುತ್ತಾರೆ. ನಾನು ಮತ್ತು ಹೊನ್ನಪ್ಪ ನವರು ಜೊತೆಯಲ್ಲಿದ್ದು ನಾನು ಸಾಕ್ಷಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಶಿವಣ್ಣನ ಮಗ ಹೊನ್ನಪ್ಪ ಬದುಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನೇ ಸದರಿ ದಾಖಲಾತಿಯಲ್ಲಿ ಸಹಿ ಮಾಡಿದ್ದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಿಲ್ ನಲ್ಲಿ ಇರುವ ಸಹಿ ಮತ್ತು ವಕಾಲತ್ ನಲ್ಲಿ ಇರುವ ಸಹಿ ಒಂದೇ ಎಂದು ಪರಿಶೀಲನೆ ಮಾಡಲು ತಜ್ಞರಿಗೆ ಕಳುಹಿಸಲು ನನಗೆ ಯಾವುದೆ ತಕರಾರು ಇರುವುದಿಲ್ಲ. ನನ್ನ ತಂದೆ ತೀರಿಕೊಂಡ ನಂತರ ವಿಲ್ ಪ್ರಕಾರ ರಾಜು ರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿಯು ಅದು ಯಾವ ರೀತಿಯಲ್ಲಿ ಖಾತೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸಾಕ್ಷಿಯು ಅದು ನನ್ನ ತಂದೆಗೆ ಸರ್ಕಾರದಿಂದ ಮಂಜೂರಾಗಿರುವ ಜಮೀನಾಗಿರುತ್ತದೆ ಮತ್ತು ನನ್ನ ತಂದೆ ಅದನ್ನು ದುಡ್ಡು ಕೊಟ್ಟು ಸಂಪಾದನೆ ಮಾಡಿರುವುದಿಲ್ಲ, ಆದ್ದರಿಂದ ಅದು ನನ್ನ ತಂದೆಯ ಸ್ವಯಾ ರ್ಜಿತ ಸ್ವತ್ತಾಗಿರುವುದಿಲ್ಲ. ದಾವಾ ಸ್ವತ್ತಿಗೆ ರಾಜು ಪೂರ್ಣ ಮಾಲೀಕರು ಎಂದರೆ ಸುಳ್ಳು. ರಾಜು ವಿಗೆ ಆಗಿರುವ ಖಾತೆ ಮ್ಯುಟೇಷನ್ ನ್ನು ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಪ್ರಶ್ನೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನನ್ನ ಇನ್ನಿಬ್ಬರು ಸಹೋದರರು ವಿದ್ಯಾಭ್ಯಾಸ ಮತ್ತು ತಿಳುವಳಿಕೆ ಇಲ್ಲದೆ ಇದ್ದ ಕಾರಣ ಅವರು ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಅದರೆ ನನಗೆ ವಿದ್ಯಾಭ್ಯಾಸ ಮತ್ತು ತಿಳುವಳಿಕೆ ಇರುವುದರಿಂದ ಅದನ್ನು ಪ್ರಶ್ನೆ ಮಾಡಿದ್ದೇನೆ. ಪ್ರಸ್ತುತ ದಾವೆಯನ್ನು ಬಿಟ್ಟು ನಾನು ಬೇರೆ ಎಲ್ಲೂ ಅದನ್ನು ಪ್ರಶ್ನೆ ಮಾಡಿರುವುದಿಲ್ಲ. ಪ್ರತಿವಾದ ಪತ್ರ ನ್ಯಾಯಾಲಯಕ್ಕೆ ವಾದಿ 4 ರವರು ಸಲ್ಲಿಸಿದ ನಂತರ ನಾನು ವಿಲ್ ನ್ನು ಪ್ರಶ್ನೆ ಮಾಡಿರುವುದಿಲ್ಲ.

ನಿ ಪಿ 1 ರಲ್ಲಿ ನಾನು ಸಹಿ ಮಾಡಿರುತ್ತೇನೆ. ಅದನ್ನು ಸಾಕ್ಷಿ ಗುರುತಿಸಿದ್ದು ಸದರಿ ಸಾಕ್ಷಿಯ ಸಹಿಯನ್ನು ಈಗಾಗಲೇ ನಿ ಪಿ 1 ಎ ಎಂದು ಗುರುತಿಸಲಾಗಿದೆ. ನಿ ಪಿ 1 ಎ ನಲ್ಲಿನಾನು ಕನ್ನಡದಲ್ಲಿ ಸಹಿ ಮಾಡಿರುತ್ತೇನೆ ಮತ್ತು ವಕಾಲತ್ ನಲ್ಲಿ ಆಂಗ್ಲ ಭಾಷೆಯಲ್ಲಿ ಸಹಿ ಮಾಡಿರುತ್ತೇನೆ, ಅದಕ್ಕೆ ಕಾರಣ ನನಗೆ ನಿ ಪಿ 1 ರಲ್ಲಿ ಕನ್ನಡದಲ್ಲಿ ಸಹಿ ಮಾಡಬೇಕೆಂದು ಅನ್ನಿಸಿತ್ತು ಅದಕ್ಕೆ ಮಾಡಿರುತ್ತೇನೆ. ನನಗೆ ಬೇಕಾದಾಗ ಕನ್ನಡದಲ್ಲಿ ಮತ್ತು ಮತ್ತೊಂದು ಸಲ ಮನಸ್ಸಿದ್ದಾಗ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆಂದರೆ ಸರಿ. ಆದ್ದರಿಂದ ನಾನು ವಿಲ್ ನಲ್ಲಿ ಆಂಗ್ಲ ಭಾಷೆಯಲ್ಲಿ

ಸಹಿ ಮಾಡಬೇಕೆಂದು ಅನ್ನಿಸಿದ ಕಾರಣ ಮಾಡಿರುತ್ತೇನೆ ಎಂದರೆ ಸುಳ್ಳು, ನಾನು ವಿಲ್ ನಲ್ಲಿ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಪ್ರತಿವಾದಿ 4 ರವರಿಗೆ ಸೇರಿದ ಆಸ್ತಿ ನಾನು ಮತ್ತು ಪ್ರತಿವಾದಿ 1 ರಿಂದ 3 ರವರು ಸುಳ್ಳು ಕರಾರನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸುಳ್ಳು.

ಪ್ರತಿವಾದಿ 1 ರಿಂದ 3 ರವರಿಗೆ ಕರಾರುಪತ್ರ ಬರೆದುಕೊಡಲು ಯಾವುದೆ ಹಕ್ಕು ಇರುವುದಿಲ್ಲವೆಂದರೆ ನಮಗೆಲ್ಲ ಹಕ್ಕು ಇತ್ತು. ನಿಪಿ 1 ರಲ್ಲಿ ವಿಲ್ ಬಗ್ಗೆ ನಮೂದಾಗಿರುತ್ತದೆ ಮತ್ತು ನನಗೆ ಪ್ರತಿವಾದಿ 4 ರವರಿಗೆ ಖಾತೆಯಾಗಿರುವ ವಿಚಾರ ಗೊತ್ತಿರುತ್ತದೆ ಎಂದರೆ ಸುಳ್ಳು. ನಿ ಪಿ 1 ರಲ್ಲಿ ಅಗ್ರಿಮೆಂಟ್ ಟೈಪ್ ಆದ ನಂತರ 3ನೆ ಪುಟ 2ನೆ ಪ್ಯಾರಾ 4ನೆ ಸಾಲನ್ನು ಮತ್ತೆ ಸೇರಿಸಲಾಗಿದೆ ಎಂದರೆ ಸಾಕ್ಷಿಯು ಸೇರಿಸಿರುವುದು ನಿಜ, ಆದರೆ ಆ ದಿನ ವಿಲ್ ನ್ನು ತರದೆ ಇದ್ದ ಕಾರಣ ಅದನ್ನು ನಂತರ ಸೇರಿಸಲಾಗಿದೆ. ನಮಗೆ ಸೇರದೆ ಇರುವ ಆಸ್ತಿಯನ್ನು ಸೇರಿಸಲು ಕರಾರು ಆದ ನಂತರ ಸದರಿ ಅಂಶವನ್ನು ಸೇರಿಸಿರುತ್ತೇವೆ  ಎಂದರೆ ಸುಳ್ಳು.

ಪ್ರತಿವಾದಿ 4 ರವರ ಸಹಿಯನ್ನು ನಾನೇ ನಿ ಪಿ 1 ರಲ್ಲಿ ಮಾಡಿರುತ್ತೇನೆ ಎಂದರೆ ಸುಳ್ಳು.  ನಿ ಪಿ 1 ಸುಳ್ಳು ದಾಖಲಾತಿಯಾಗಿದ್ದು, ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 1 ರಲ್ಲಿ ನನಗೆ ಸೇರದೆ ಇರುವ ಆಸ್ತಿಯನ್ನು ಮಾರಲು ಪ್ರತಿವಾದಿ 4 ರವರ ಆಸ್ತಿಯನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು. 2016 ರಲ್ಲಿ ನಿ ಪಿ 1 ಮಾಡಿದಾಗ ನನಗೆ ವಿಲ್ ವಿಚಾರ ಗೊತ್ತಿತ್ತು ಎಂದರೆ ಸುಳ್ಳು.  2016 ರಲ್ಲಿ ವಿಲ್ ಬಗ್ಗೆ ಗಗೊತ್ತಿದ್ದರೂ ಈ ದಿನದವರೆಗೂ ವಿಲ್ ನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ 4 ರವರು ಕರಾರು ಮಾಡಲು ಬರದೇ ಇದ್ದಿದ್ದರೆ ನಾನು ಅದನ್ನು ಪ್ರಶ್ನೆ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಿ ಪಿ 1 ಕ್ಕೆ ಪ್ರತಿವಾದಿ 4 ರವರು ಸಹಿ ಮಾಡಿರುವುದಿಲ್ಲ ಮತ್ತು ಅದಕ್ಕೆ ಅವರು ಪಕ್ಷಗಾರರಲ್ಲ ಎಂದರೆ ಸುಳ್ಳು.

**ಪಾಟೀ ಸವಾಲಿಗಾಗಿ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು,ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

ಮಾಗಡಿ.